**ಸಾಕ್ಷಿಗೆ ದಿನಾಂಕಃ06-08-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ವಾದಿ ಪರ ಶ್ರೀ.MKT ವಕೀಲರಿಂದ ::**

ನನಗೆ ಶಾರದಮ್ಮ ರವರ ಪರಿಚಯ ಇದ್ದು ಅವರಿಗೆ 3 ಜನ ಗಂಡು ಹಾಗೂ 3 ಜನ ಹೆಣ್ಣು ಮಕ್ಕಳು ಇದ್ದರು. ಸದರಿ ಶಾರದಮ್ಮ ರವರಿಗೆ ಅಜ್ಜಂಪುರ ಪೇಟೆಯಲ್ಲಿ ಒಂದು ನಿವೇಶನ ಇತ್ತು ಎಂದರೆ ಸರಿ. ಸದರಿ ನಿವೇಶನ ವಿಸ್ತೀರ್ಣ ನನಗೆ ಈಗ ನೆನಪಿಲ್ಲ. ಶಾರದಮ್ಮ ರವರ ಮಕ್ಕಳು ಬೆಂಗಳೂರಿನಲ್ಲಿ ವಾಸ ಮಾಡಲು ಪ್ರಾರಂಭ ಮಾಡಿ ಸುಮಾರು 50 ವರ್ಷಗಳಾಗಿರಬಹುದು ಎಂದರೆ ಸರಿ. ನಾನು ದಾವಾ ಸ್ವತ್ತನ್ನು ಹೊರತುಪಡಿಸಿ ಅಜ್ಜಂಪುರದಲ್ಲಿ ಪೇಟೆಯಲಿ ನಾನು ಬೇರೆ ಯಾವತ್ತು ಸ್ವತ್ತನ್ನು ಖರೀದಿ ಮಾಡಿರುವುದಿಲ್ಲ. ಶಾರದಮ್ಮ ರವರ ಗಂಡನ ಹೆಸರು ವೆಂಕಟಚಲಯ್ಯ ಆಗಿದ್ದು ಅವರು ಯಾವಾಗ ಮೃತರಾಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ಶಾರದಮ್ಮ ಮತ್ತು ಅವರ ಮಕ್ಕಳು ಅವಿಭಕ್ತ ಕುಟುಂಬದಲ್ಲಿ ವಾಸ ಮಾಡಿಕೊಂಡಿದ್ದರು ಎಂದರೆ ಸಾಕ್ಷಿಯು ಹಿಂದೆ ವಾಸ ಮಾಡಿಕೊಂಡಿದ್ದರು ಎಂದು ನುಡಿಯುತ್ತಾರೆ. ಶಾರದಮ್ಮ ರವರ ಜೀವಿತಾ ಅವಧಿಯಲ್ಲಿ ದಾವಾ ಶೆಡ್ಯೂಲ್ ಸ್ವತ್ತನ್ನು ಅವರ ಮಕ್ಕಳು ಮತ್ತು ಅವರ ವಿಭಾಗ ಮಾಡಿಕೊಂಡಿರಲಿಲ್ಲ ಎಂದರೆ ಸರಿ. ಶಾರದಮ್ಮ ರವರ ನಿವೇಶನ ಪೈಕಿ ನಾನು 2 ಭಾಗಗಳನ್ನು ಖರೀದಿ ಮಾಡಿದ್ದು ಒಂದನ್ನು ಶಾರದಮ್ಮ ರವರಿಂದ ಮತ್ತೊಂದನ್ನು ಅವರ ಮಗ ಕೃಷ್ಣಮೂರ್ತಿ ರವರಿಂದ ಖರೀದಿ ಮಾಡಿರುತ್ತೇನೆ. ದಾವಾ ಐಟಂ 1 ರಿಂದ 3 ನ್ನು ವಾದಿ ಖರೀದಿ ಮಾಡಿರುವ ವಿಚಾರ ನನಗೆ ಹಿಂದೆ ತಿಳಿದಿರಲಿಲ್ಲ, ಆದರೆ 11.11.2014 ರಂದು ಮುನಿಸಿಪಾಲಿಟಿಯಿಂದ ಸದರಿ ವಿಚಾರ ತಿಳಿದಿರುತ್ತದೆ. ದಾವಾ ಶೆಡ್ಯೂಲ್ ಸ್ವತ್ತಿನ ಖಾತೆಯನ್ನು ವಾದಿ ಬದಲಾವಣೆ ಮಾಡಿಕೊಳ್ಳಲು ಅರ್ಜಿ ನೀಡಿದ ಸಮಯದಲ್ಲಿ ನಾನು ಅದಕ್ಕೆ ತಕರಾರು ಹೂಡಿರುತ್ತೇನೆ, ಸದರಿ ತಕರಾರನ್ನು ನ್ಯಾಯಾಲಯಕ್ಕೆ

ಹಾಜರುಪಡಿಸಿರುತ್ತೇನೆ. ನಾನು ಹಿಂದಿನಿಂದ ಟೈಲರಿಂಗ್ ಮಾಡಿಕೊಂಡು ನಮ್ಮ ಕುಟುಂಬದ ನಿರ್ವಹಣೆ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ನನಗೆ ವಾಸದ ಮನೆ ಇದ್ದು ಅದು ನನಗೆ ನನ್ನ ಇಬ್ಬರು ಸಹೋದರರು ನೀಡಿರುತ್ತಾರೆ.

ಶಾರದಮ್ಮ ರವರ ಮಕ್ಕಳ ವಿರುದ್ದ ನಾನು ಇದೇ ನ್ಯಾಯಾಲಯದಲ್ಲಿ 2014 ರಿಂದ ಇಲ್ಲಿಯವರೆಗೂ ಎರಡು ಪ್ರಕರಣಗಳನ್ನು ಹೂಡಿರುತ್ತೇನೆ. ಸಾಕ್ಷಿಯು ಮುಂದುವರೆದು ಅವುಗಳನ್ನು ಕೃಷ್ಣಮೂರ್ತಿ ರವರ ವಿರುದ್ದ ಹೂಡಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಶೆಡ್ಯೂಲ್ ಸ್ವತ್ತಿನ ಪಕ್ಕದಲ್ಲಿ ಕಮಲಮ್ಮ ರವರ ಮನೆ ಇದ್ದು ಅವರ ಜೊತೆ ನನಗೆ ಒಳ್ಳೆ ವಿಶ್ವಾಸ ಇರುತ್ತದೆ.

**(ಮುಂದುವರಿದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ. ತರೀಕೆರೆ

(ಸಂಚಾರಿ ನ್ಯಾಯಾಲಯ ಅಜ್ಜಂಪುರ)

ಸಾಕ್ಷಿಯ ಸಹಿ: